

ಪರಿಣಾಮಕಾರಿಯಲ್ಲ. ಅನ್ಯಾಯ ಎನ್ನುವುದು ಎಲ್ಲ ಕಡೆ ತನ್ನ ಕೈಯನ್ನು ಚಾಚಿದೆ. ಜಾತಿ, ವರ್ಗ, ಅಂಗವಿಕಲ ತಾರತಮ್ಯದ ಒಳಗೂ ಹುಟ್ಟಿನಿಂದ 'ಗಂಡು' ಎಂದಾಗಿದ್ದರೆ, ಸಮಾಜ ಅವನಿಗೊಂದು ಸಾಮರ್ಥ್ಯವನ್ನು ತುಂಬುತ್ತದೆ. ಅದೇ ಮಹಿಳೆ ಪುರುಷನಾದರೆ ಆ ಸಮಸ್ಯೆಯ ಘೋರತೆ ಒಂದು ರೀತಿ, ಹೆಣ್ಣು ಗಂಡಾಗುವ ಪರಿಯ ಸಮಸ್ಯೆಯೇ ಬೇರೆ. ಕೆಲವು ಕುಟುಂಬಗಳಲ್ಲಿ, 'ಮದುವೆ ಬೇಡ' ಎಂದರೆ ಅವರ ಆಯ್ಕೆಯನ್ನು ಗೌರವಿಸುತ್ತಾರೆ. 'ಮದುವೆ ಬೇಡ' ಎಂದು ಹೆಣ್ಣು ಹಾಗೂ ಗಂಡು ಹೇಳಿದಾಗ, ಕುಟುಂಬ ತೆಗೆದುಕೊಳ್ಳುವ ನಿರ್ಧಾರ ಒಂದೇ ರೀತಿ ಇರುವುದಿಲ್ಲ. ಈ ಕಾರಣಕ್ಕೆ ಹೆಣ್ಣು ಗಂಡಾಗುವ ಕ್ರಿಯೆಯಲ್ಲಿ ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತರು ಆಗುತ್ತಾರೆ. ಆದರೂ ಅನೇಕರು ತಮ್ಮ ಐಡೆಂಟಿಟಿಯನ್ನು ಗುರುತಿಸಿಕೊಳ್ಳುವುದೇ ಇಲ್ಲ.

ಹೆಣ್ಣು–ಗಂಡು ಎಂದು ಸರಳವಾಗಿ ವರ್ಗೀಕರಿಸುವ ಸಮಾಜ ಲಿಂಗ–ಲಿಂಗತ್ವ–ಲೈಂಗಿಕತೆಯ ವಿಷಯವನ್ನು ಮುಕ್ತವಾಗಿ ತಿಳಿಸುವುದೇ ಇಲ್ಲ. 'ಇದಲ್ಲ, ನಾನು ಅದು' ಎಂದರೆ, 'ಬಾಯಿ ಮುಚ್ಚಿಕೊಂಡು ಇರು' ಎನ್ನುತ್ತಾರೆ. 'ಹೆಣ್ಣುಮಕ್ಕಳಲ್ವಾ, ಹೊಂದಿಕೊಂಡು ಹೋಗು' ಎನ್ನುವ ಪರಿಹಾರ ಸೂತ್ರದಂತೆ ಅಡ್ಜೆಸ್ಟ್ ಮಾಡಿಕೊಂಡು ಹೋಗಬೇಕು.

ನನಗೆ ಸರ್ಜರಿ ಆಗಿದೆ. ಸಮಸ್ಯೆ ಇಲ್ಲ. ಆದರೂ, 'ಹೆಂಗಸಾಗಿ ನೀನೇನು ಕಳೆದುಕೊಂಡೆ?', 'ಅವರು ಗಂಡಸುತನ ಕಳೆದುಕೊಂಡಿದ್ದಾರೆ ಗೊತ್ತಾ?' ಎಂದು ಕೇಳುವವರೂ ಇದ್ದಾರೆ". ರೂಮಿ ಅವರ ಮಾತುಗಳಲ್ಲಿ ಸಂಕಟ, ವಿಷಾದ ಹಾಗೂ ಸ್ಪಷ್ಟ ಅರಿವಿನ ದಿಟ್ಟತನ ಇಣುಕುತ್ತದೆ.

'ರಾಜಕೀಯ ಪ್ರಾತಿನಿಧ್ಯ ಅತಿ ಮುಖ್ಯ. ಯಾವುದೇ ವೇದಿಕೆ ತೆಗೆದುಕೊಂಡರೂ ಅಲ್ಲಿ ಲಿಂಗ ಅಸಮಾನತೆ ದೊಡ್ಡದಾಗಿ ಕಾಣಿಸುತ್ತದೆ. ರಾಜಕಾರಣದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೂ ಮಾನ್ಯತೆ ಸಿಗಬೇಕು ಎಂದು ಧ್ವನಿ ಎತ್ತಬೇಕಿದೆ. ಶಾಲೆಯಲ್ಲಿ ಜೆಂಡರ್ ವೈವಿಧ್ಯವನ್ನು ತಿಳಿಸಬೇಕು. ಮಕ್ಕಳಿಗೆ ಲಿಂಗತ್ವ, ಜೆಂಡರ್, ಲೈಂಗಿಕತೆ ಎಂದರೆ ಏನು ಎಂದು ಸ್ಪಷ್ಟವಾಗಬೇಕು. ಇದು ಕಿಶೋರಾವಸ್ಥೆಯಿಂದ ವೃದ್ಧಾಪ್ಯದವರೆಗೂ ಅರಿವಾಗಬೇಕು. ಸೆಕ್ಸ್ ಅಂದರೆ ಲೈಂಗಿಕತೆ ಮಾತ್ರ. ಇದನ್ನೂ ತುಂಬ ಘನತೆಯಿಂದಲೇ ಮುಕ್ತವಾಗಿ ಮಾತನಾಡಬೇಕು. ಕೆಲವರಿಗೆ ವಿಚಿತ್ರ ಕುತೂಹಲ. 'ತಪ್ಪು ತಿಳಿದುಕೊಳ್ಳದಿದ್ದರೆ ಒಂದು ಪ್ರಶ್ನೆ ಕೇಳುತ್ತೇನೆ' ಎಂದು ಪೀಠಿಕೆ ಹಾಕಿ, 'ನೀವು ಹೇಗೆ ಸೆಕ್ಸ್ ಮಾಡುತ್ತೀರಿ' ಎಂದು ಕೇಳುತ್ತಾರೆ. ಇದನ್ನು ನೇರವಾಗಿ, ಘನತೆಯಿಂದಲೇ ಕೇಳಬಹುದು. ಅದನ್ನು ನಿಕೃಷ್ಟವಾಗಿ ನೋಡಬಾರದು. ಆರೋಗ್ಯಪೂರ್ಣವಾಗಿ ಮಾತನಾಡುವ ಸಭ್ಯತೆ ಬೇಕು' ಎನ್ನುವ ರೂಮಿ ಹರೀಶ್‌ರ ಮಾತು ಸಮಾಜದಲ್ಲಿ ಎಲ್ಲರ ಎದೆಗೆ ಬೀಳಬೇಕಾಗಿದೆ.

# ಪ್ರತ್ಯೇಕ ಕಲ್ಯಾಣ ಮಂಡಳಿ, ಶಾಸನಸಭೆ ಪ್ರಾತಿನಿಧ್ಯ ಬೇಕು...

**ಅಕ್ಕಯ್ ಪದ್ಮಸಾಲಿ**



ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಹೋರಾಟಕ್ಕೆ ಮೊದಲ ಧ್ವನಿಯಾಗಿದ್ದು 'ಪ್ರಜಾವಾಣಿ' ದಿನ ಪತ್ರಿಕೆ ಎನ್ನುತ್ತಾರೆ ಅಕ್ಕಯ್ ಪದ್ಮಸಾಲಿ. ಅವರು ಲಿಂಗ ಪರಿವರ್ತಿತ ಮಹಿಳೆ, ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಕಾರ್ಯಕರ್ತೆ.

ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ನೋವುಗಳನ್ನು ಕುರಿತು ಮೊದಲ ಬಾರಿಗೆ, 1997–98ರಲ್ಲಿ 'ಪ್ರಜಾವಾಣಿ'ಯಲ್ಲಿ ಲೇಖನ ಪ್ರಕಟವಾಯಿತು. ಆ ಬರಹ, ತಮ್ಮ ಅಸ್ತಿತ್ವದ ಬಗ್ಗೆ ಸಮಾಜಕ್ಕೆ ಮನವರಿಕೆ ಮಾಡಿಕೊಟ್ಟ ಮೊದಲ ಪ್ರಯತ್ನ ಎನ್ನುತ್ತಾರೆ ಅಕ್ಕಯ್.

"ಲಿಂಗತ್ವ ಅಲ್ಪಸಂಖ್ಯಾತರು ಮೂವತ್ತು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದಾರೆ. ಲಿಂಗತ್ವ–ಲೈಂಗಿಕತೆಯ ಕಾರಣಕ್ಕೆ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಲೇ ಇದೆ. ಅದಾಗಬಾರದು ಎನ್ನುವುದು ಆರಂಭದ ಕೋರಿಕೆಯಾಗಿತ್ತು. ಕ್ರಮೇಣ ಅವರ ಚಳವಳಿ ಸಾಮಾಜಿಕ, ರಾಜಕೀಯ ಆರ್ಥಿಕ ವ್ಯವಸ್ಥೆಯ ಆಯಾಮದತ್ತ ತಿರುಗಿದೆ. ಅದರಲ್ಲಿ ಅತ್ಯಂತ ಪ್ರಮುಖ ವಿರೋಧ, ಪೊಲೀಸ್ ದೌರ್ಜನ್ಯದ ವಿರುದ್ಧ ಇತ್ತು. ಭಾರತೀಯ ದಂಡ ಸಂಹಿತೆ 377ರ ಅಡಿ, ಅವರನ್ನು ಅಪರಾಧಿಗಳಂತೆ ನೋಡಿಕೊಳ್ಳುತ್ತಿದ್ದರು. ಇಪ್ಪತ್ತು ವರ್ಷದ ಮೊದಲು ಇವತ್ತಿನಂತೆ ಮಾತನಾಡುವಂತೆಯೂ ಇರಲಿಲ್ಲ. ಅದು ತುಂಬ ಮಡಿವಂತಿಕೆಯ ವಿಷಯವಾಗಿತ್ತು. ಮಡಿವಂತಿಕೆಯ ಭಾವನೆಯಿಂದ ಸಮಾಜ